ಮೈಸೂರ ಗಿಜಿಟ.

ನಂ. XXXI.] ಸರ್ಕಾರದಿಂದ ಘಾಯಿಷ್ ಆದ್ದು. [ನಂ. 35.

ಬೆಂಗಳೂರು, ಗುರುವಾರ, ಸೆಪ್ಟೆಂಬರ್ ತಾ॥ 3, ಸ್ ೧೮೯೬.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟು, ರೆಜಿಸ್ಟ್ರೇರ್ಷ ವ ಯಡ್ಯುಕೇಷ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷ್ ಜಡ್ಜಿರು, ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜಿರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು—ಮೈಸೂರ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್‌ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮುಂಜಾರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷ್‌ಗಳು. ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—ಇಲ್ಲ.

ಈ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 11ನೇ ಆಗಸ್ಟ್ 1896.

ನಂ. 2114.—ಜು. 226, ಸ್ 1877ನೇ ಇಸವಿಯ IIIನೇ ಆಕ್ಟಿನ ಇಂಡಿಯನ್ ರೆಜಿಸ್ಟ್ರೇರ್ಷ ಆಕ್ಟಿನ 5ನೇ ಸೆಕ್ಷನ್ ಅನುಸರಿಸಿ, ಮೈಸೂರ್ ಗವರ್ಮೆಂಟಿನವರು ಆಜ್ಞೆ ಕೊಡುವದೇನಂದರೆ,—ಬೆಂಗಳೂರ ತಾಲ್ಲೂಕಿನ ಹಾಲೀ ಸಬ್ ರೆಜಿಸ್ಟ್ರೀ ಆಫೀಸ್ ಎರಡು ಪ್ರತ್ಯೇಕ ಆಫಿಸುಗಳಾಗಿ, ಒಂದು ಮುನಿಸಿಪಲ್ ಸರಹದ್ದುಗಳಲ್ಲಿ ಅಧಿಕಾರ ಪುಳ್ಳಂಥಾ ಬೆಂಗಳೂರ ಷಹರಗೋಸ್ಕರವೂ, ಮತ್ತೊಂದು ಬೆಂಗಳೂರ ಷಹರಿನ ಶಿವಾಯಿ ಬೆಂಗಳೂರ ತಾಲ್ಲೂಕಿಗೋಸ್ಕರವೂ, ಮಾಡಲ್ಪಡತಕ್ಕದ್ದು.

2. ಮೇಲ್ಕಂಡ ವಿಭಾಗುಗಳು 1896ನೇ ಆಗಸ್ಟ್ ಗುರ್ರೇ ಲಾಗಾಯತು ಜಾರೀಗೆ ಬರತಕ್ಕದ್ದು.

ತಾರೀಖು 13ನೇ ಆಗಸ್ಟ್ 1896.

ನಂ. 2205. – ಮಿ. ಫೈ. 48—92, ಇದರಿಂದ ಸಕಲ ಜನರ ತಿಳುವಳಿಕೆ ಬಗ್ಗೆ ಪ್ರಕಟಿಸುವದೇನಂದರೆ, ಬಂದು ಗವರ್ಮೆಂಟ್ ಟೆಲಿಗ್ರಾಫ್ (ಪೋಸ್ಟ್ ಮತ್ತು ಟೆಲಿಗ್ರಾಫ್ ಕೇರರುವ) ಆಫಿಸ್ ಗುಂಡ್ಲುಪೇಟೆಯಲ್ಲಿ 1896ನೇ ಆಗಸ್ಟ್ ಗುರ್ರೆ ಲಾಗಾಯತು ಸ್ಥಾಪಿಸಲ್ಪಟ್ಟಿರುತ್ತೆ.

ನಂ. 2190.—ಲೋ. ಘಂ. 257—92, ಸ್ 1894ನೇ ಇಸವಿಯ VIIನೇ ಲ್ಯಾಂಡ್ ಅಕ್ವಿಜಿಷ್ ಆಕ್ಟಿನ 6ನೇ ಸೆಕ್ಷನ್ ನಿಯಮಗಳನುಸರಿಸಿ ಪ್ರಸಿದ್ಧಪಡಿಸುವದೇನಂದರೆ, ಇದಕ್ಕೆ ಜಂಟಿಸಿರುವ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ ಬೆಂಗಳೂರು ಷಹರಿನಲ್ಲಿ ಫರ್ಟರ್ಪಯಾನೆ ಜಲಾಶ್ರಯ ಕಟ್ಟುವ ಬಗ್ಯಾಗಿ ಅವಶ್ಯಕವಾಗಿರುತ್ತೆ.

ಡಿವಿಜ್.	ನಂ.	ನೊಟೀಸಿಗರ ಹೆಸರು.	ವರಾಂ.	ವಿವರ.	ವಿಸ್ತೀರ್ಣ		ಚಕ್ಕುಬಂದಿ.			
					ಪೂರ್ವ ಪಶ್ಚಿಮ ಅಡಿಗಳು.	ಉತ್ತರ ದಕ್ಷಿಣ ಅಡಿಗಳು.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
IV.	ತಾಲ್ಲೂಕು ಕಚೇರಿ ರಸ್ತೆ.	ಕೊಟ್ಟಿ ಅಪ್ಪಣ್ಣನವರ ಮಗ ಕೊಟ್ಟಿ ನರಸಿಂಹಣ್ಣನವರು.	ನಂ. 94ರ ಸ್ವಲ್ಪ ಭಾಗ.	ಖಾಲಿ ಜಮೀನಿನ ಒಂದು ಭಾಗ.	11	6	ಅದೇ 94ನೇ ನಂಬರ್ ಜಗಲಿ.	ಪಬ್ಲಿಕ್ ಬೀದಿ.	ಅದೇ 94ನೇ ನಂಬರ್ ಮನೆ.	ತಾಲ್ಲೂಕು ಕಚೇರಿ ರಸ್ತೆ.

ನಂ. 2193.—ಲೋ. ಫಂ. 257—92, ಸ್ ಈ 1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷ್ ರೆಗ್ಯುಲೇಷನಿನ ನಿಯಮಗಳನುಸರಿಸಿ ಪ್ರಸಿದ್ಧಪಡಿಸುವದೇನಂದರೆ, ಇದರಡಿ ಕಂಡ ಜಮೀನ್‌ಗಳು ಮತ್ತು ಕಟ್ಟಡ ಸರ್ಕಾರ್ ಕೆಲಸಕ್ಕೆ ಅಂದರೆ ಕುಣಿಗಲ್ ಮ್ಯುನಿಸಿಪಾಲಿಟಿಯಲ್ಲಿ ಬಂದು ರಸ್ತೆ ವಿಸ್ತಾರಪಡಿಸುವ ಬಗ್ಯಾಗಿ ಅವಶ್ಯಕವಾಗಿರುತವೆ.

ನಂಬರು.	ಜೀವಿಯ ಹೆಸರು.	ಜೋಡಿ ನಂಬರ್.	ಹಿಡುವಳಿದಾರ್ರ ಹೆಸರು.	ಜೇಕಾಗಿರುವ ವಿಸ್ತೀರ್ಣ, ಅಡಿಗಳು.		ತಪ್ಪಿಲು.	ಚಕ್ಕುಬಂದಿ.				ಷರಾ.
				ಪೂರ್ವ ಪಶ್ಚಿಮ.	ಉತ್ತರ ದಕ್ಷಿಣ.		ಉತ್ತರ.	ಪೂರ್ವ.	ದಕ್ಷಿಣ.	ಪಶ್ಚಿಮ.	
1	ಖಾಜಲೇಗನಹಳ್ಳಿ ಬೀದಿ.	784	ಬಳ್ಳೇ ತಿಮ್ಮಯ್ಯ.	21	20	ಹೆಂಚು ಮತ್ತು ಮಣ್ಣಿನ ಗೋಡೆಗಳ ಮನೆ (3 ಅಂಕಣಗಳು.)	ಸರ್ಕಾರ್ ರಸ್ತೆ.	ಸುಬದ ಪುಟ್ಟಸ್ವಾಮಿನವರ ಮನೆ ಮತ್ತು ಜಮೀನ್.	ಸುಬದ ಪುಟ್ಟಸ್ವಾಮಿನವರ ಒತ್ತಲು.	ಸರ್ಕಾರ್ ರಸ್ತೆ.	

ತಾರೀಖು 26ನೇ ಆಗಸ್ಟ್ 1896.

ನಂ. 2753.—ಎಜ್ಯು. 108, ಪ್ರೊಜೇಷನರಿ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ಸ್ ಏ. ಸುಬ್ರಹ್ಮಣ್ಯ ಅಯ್ಯರ್, ಬಿ. ಏ., ಯವರು 1893ನೇ ಜೂ 24ನೇ ಮಕ್ಕುಂ 21411.—24.—ಜಿ. ಎಫ್. 387.—92ನೇ ನಂಬರ್ ಪ್ರೊಸೀಡಿಂಗ್ಸಿನಲ್ಲಿ ಗವರ್ಮೆಂಟಿನವರಿಂದ ವಿಧಿಸಲ್ಪಟ್ಟ ಸ್ಟ್ಯಾಂಡರ್ಡಿನ ಮೇರೆ ಮೈಸೂರು ಸಿವಿಲ್ ಸರ್ವಿಸಿಗಾಗಿ ಜೇಕಾದ ಪರೀಕ್ಷೆಯು ಕನ್ನಡದಲ್ಲಿ ಪಾಸ್ ಮಾಡಿರುತ್ತಾರೆ.

ನಂ. 2755.—ಎಜ್ಯು. 110, ಪೋಲೀಸ್ ಅಸಿಸ್ಟೆಂಟ್ ಸೂಪರ್‌ಟೆಂಡೆಂಟರ ಕೆಲಸ ನೋಡುತಲಿರುವ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ಆರ್. ಬಿ. ಪ್ಲೈಮರ್ ಯವರು ಕನ್ನಡ ಭಾಷೆಯಲ್ಲಿ ಪರೀಕ್ಷೆಯನ್ನು ತೃಪ್ತಿಕರವಾಗಿ ಪಾಸ್ ಮಾಡಿರುತ್ತಾರೆ.

ತಾರೀಖು 27ನೇ ಆಗಸ್ಟ್ 1896.

ನಂ. 2796.—ಜು. 294, ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 9ನೇ ಸೆಕ್ಷನ್ ಅನುಸರಿಸಿ, ನಂದೀದುರ್ಗ ಡಿವಿಜ್ ಆಫ್ಟಿಂಗ್ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜ್‌ರಾದ ಮೆಸ್ಸರ್ ಎಸ್. ಆರ್. ಸುಬ್ಬರಾಯುಅಯ್ಯರ್, ಬಿ. ಏ., ಯವರು ಮೆಸ್ಸರ್ ಟಿ. ನರಹರರಾಯುರಿಗೆ ಚಾರ್ಜ್ ವೊಪ್ಪಿಸುವ ತಾರೀಖಿನ ಲಾಗಾಯತು ಅಷ್ಟಗ್ರಾಮ ಡಿವಿಜ್ ಅಡಿಷನಲ್ ಸೆಷನ್ಸ್ ಜಡ್ಜ್‌ರಾಗಿ ಹಗಾಮಿ ತರೀಕ್ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 20ನೇ ಆಗಸ್ಟ್ 1896.

ನಂ. 2506.—ಲೋ. ಘಂ. 257.—92, ಸ್ 1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷ್ನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಪ್ರಸಿದ್ಧಪಡಿಸುವದೇನಂದರೆ, ಇದರಡಿ ಕಂಡ ಜಮೀನು ಸರ್ಕಾರ್ ಕೆಲಸಕ್ಕೆ ಅಂದರೆ ತರೀಕೆರೆ ಮ್ಯುನಿಸಿಪಾಲಿಟಿಯ ಹಿಂದೂ ಸ್ಮಶಾನಕ್ಕೆ ಹೋಗುವ ಬಗ್ಗೆ ಮಾರ್ಗ ಮಾಡುವದಕ್ಕಾಗಿ ಬೇಕಾಗಿರುತ್ತೆ.

ತಿಪ್ಪುಕ್ಕು. ತಾಲ್ಲೂಕಾನು.	ಗ್ರಾನು.	ಹಿಡುವಳಿದಾರನ ಹೆಸರು.	ಸರ್ವೆ ನಂಬರ್.	ಬೀಜವರಿ. ಎ. ಗುಂಟೆ.	ಬೇರೀಜು. ರೂ. ಆ. ಪೈ.	ಹೊಡುಕೊಳ್ಳುವವರ ವಿಸ್ತೀರ್ಣ.	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.	ಸ್ವಾಧೀನಪಡಿಸಿಕೊಳ್ಳಬೇಕಾದ ಜಮೀನಿಗೆ ಸಲ್ಲಬೇಕಾದ ಪರಿಹಾರ.	ಷರಾ.
ಕಡೂರು ತರೀಕೆರೆ	ನಲ್ಲಿ ಮೇಲ್ಭಾಗ	ಪುಟ್ಟಪ್ಪನ ಕೆಂಚಪ್ಪ ಗೌಂಡನ್ನು	11	2	29	8	0	0	ಹಣ್ಣಿ ಗುಂಪೆ ಮಾಜಿ	ಪುಟ್ಟಪ್ಪನ ಕೆಂಚಪ್ಪ ಗೌಂಡನ್ನು ನಂ. 10	ಜನಗಳು ಮೇಯುವ ಬಗ್ಗುಬಿ ಬಿಟ್ಟಿರುವ ಸರ್ವೆ ನಂ. 15 ಇ ಸರ್ವೆ ನಂ. 8ರ ಭಾಗ	ಈರ ಬಿ ವಿದ್ಯಾನಾಯಕನ ನಂ. 13	ಪುಟ್ಟಪ್ಪನ ಕೆಂಚಪ್ಪ ಗೌಂಡನ್ನು ನಂ. 9	ರೂ. ಆ. ಪೈ. 75 0 0	

ತಾರೀಖು 28ನೇ ಆಗಸ್ಟ್ 1896.

ನಂ. 2855.—ಮಿ. 487, ಗ್ವಾಲಿಯರ್ ರೆಸಿಡೆಂಟರವರಿಂದ ಮೈಸೂರ್ ರೆಸಿಡೆಂಟರವರ ಫಸ್ಟ್ ಅಸಿಸ್ಟೆಂಟರವರ ಮೂಲಕ ತಲ್ಪಿದ ಗ್ವಾಲಿಯರ್ ಸಂಸ್ಥಾನದಿಂದ ಕೊಡಲ್ಪಟ್ಟ ಈ ಕೆಳಗೆ ಕಂಡ ಇಸ್ತಿಹಾರು ಸಕಲ ಜನರ ತಿಳುವಳಿಕೆ ಬಗ್ಯಾಗಿ ಘಾಯಿಷ್ಮಾಡಲ್ಪಟ್ಟಿರುತ್ತೆ:—

ಇಸ್ತಿಹಾರ್.

ಉಜ್ಜನಿಯಲ್ಲಿ 1897ನೇ ಇಸವಿಯಲ್ಲಿ ನಡಿಯುವ ಸಿಹ್ನಸ್ತ ಮೇಲಾಕ್ಕೆ ವಿಶೇಷ ಜನ ಸಂಘವು ನಿರೀಕ್ಷಿಸಲ್ಪಟ್ಟಿರುತ್ತೆ. ಸ್ 1885ನೇ ಇಸವಿಯಲ್ಲಿ ಪ್ರಾಪ್ತವಾಗಿದ್ದಂತೆ ಘೋರವಾದ ಕಲರಾ ಉಪದ್ರವವು ಸಾಧ್ಯವಾದ ಮಟ್ಟಿಗೆ ನಿರೋಧಪಡಿಸುವ ಬಗ್ಯೆ ಈ ಕೆಳಗೆ ಕಂಡ ವಿಧ್ಯಾಡುಗಳು ಪ್ರಜೆಗಳ ಕ್ಷೇಮಾರ್ಥವಾಗಿ ಹುಕುಂ ಮಾಡಲ್ಪಟ್ಟಿರುತವೆ, ಮತ್ತು ಅವುಗಳು ಖಂಡಿತವಾಗಿ ಆಚರಿಸಲ್ಪಡತಕ್ಕದ್ದು:—

I. 1897ನೇ ವರುಷದ ಸಿಹ್ನಸ್ತ ಮೇಲಾಕ್ಕೆ ಬರತಕ್ಕ ಯಾತ್ರಿಕರು ಉಜ್ಜನಿ ಪಟ್ಟಣವನ್ನ ಪ್ರವೇಶ ಮಾಡುವದರಿಂದಲೂ ಯಾ ಸಿಪ್ರಾನದಿಯ ಧಡಗಳಲ್ಲಿ ವಾಸಮಾಡುವದರಿಂದಲೂ ನಿರೋಧಿಸಲ್ಪಟ್ಟಿರುತ್ತಾರೆ.

II. ಪರಸ್ಪರ ಮತವಿರೋಧಿಗಳು ಅವರವರ ಸ್ನಾನಘಟ್ಟಗಳಿಗೆ ಹೋಗುವಾಗ್ಯೂ ಮತ್ತು ಬರುವಾಗ್ಯೂ ಉಸ್ತುವಾರಿಯಿಂದ ಒಯ್ಯಲ್ಪಡುವರು. ಮೇಲಾವಿನ ಚಾರ್ಜಿನಲ್ಲಿರುವ ಆಫಿಸರರಿಂದ ಕೊಡಲ್ಪಡುವ ಇಸ್ತಿಹಾರುಗಳಿಂದ ಮುಂದೆ ನಿರ್ಣಯಿಸಲ್ಪಡಬಹುದಾದ ಸ್ನಾನಘಟ್ಟಗಳಲ್ಲೂ ಮತ್ತು ಕಾಲಗಳಲ್ಲೂ ಮಾತ್ರ ಸಿಪ್ರಾ ನದಿಯಲ್ಲಿ ಸ್ನಾನ ಮಾಡತಕ್ಕದ್ದು.

III. ಯಾತ್ರಿಕರು ಮೇಲಾವಿನ ಚಾರ್ಜಿನಲ್ಲಿರುವ ಆಫಿಸರಿಂದ ಕೊಡಲ್ಪಡಬಹುದಾದ ಕ್ಯಸರ್ವೆಸ್ ರೆಗ್ಯುಲೇಷ್ನಗಳಿಗೆ ವಿಧೇಯರಾಗಿರತಕ್ಕದ್ದು.

IV. ಯಾತ್ರಿಕರು ಸಿಪ್ರಾನದಿಯ ಉದಕವನ್ನ ಪಾನವಾಡುವ ಕೆಲಸಗಳಿಗಾಗಿ ಉಪಯೋಗಪಡಿಸಕೂಡದು. ಯಾತ್ರಿಕರಿಗೆ ನಿರ್ಮಲವಾದ ನೀರು ಸರಬರಾಯಿ ಮಾಡುವ ಬಗ್ಯೆ ಮೊದಲಿಗಿಂತಿರುವದಕ್ಕೆ ಜಾಸ್ತಿಯಾಗಿ ಸಾಕಾದ ಮಟ್ಟಿಗೆ ಭಾವಿಗಳು ಸಿದ್ಧಪಡಿಸಲ್ಪಡುವವು.

V. ಯಾತ್ರಿಕರು ಈ ಪಾನವಾಡುವ ಭಾವಿಗಳಿಗೆ ಶೀದಾ ಪ್ರವೇಶ ಮಾಡಕೂಡದು. ಸರ್ಕಾರ್ ವಿಚಾರಣೆಗೆ ಬಳಪಟ್ಟು ನೀರು ಬಟ್ಟೆಯ ಚೀಲಗಳ ಮೂಲಕವಾಗಿ ತೊಟ್ಟಿಗಳಲ್ಲಿ ಸೇದಿ ತುಂಬಿಸಲ್ಪಡುವದು. ಸದರೀ ತೊಟ್ಟಿಗಳಿಂದ ನೀರು ಅವುಗಳ ರಂಧ್ರಮೂಲಕ ತೆಗದುಕೊಳ್ಳಬೇಕು. ಇವುಗಳು ಸದರೀ ಕೆಲಸಕ್ಕಾಗಿ ಸರಕಾರದಿಂದ ನೇಮಿಸಲ್ಪಡುವ ಬ್ರಾಹ್ಮರ ವಕದಲ್ಲಿರತಕ್ಕದ್ದು.

VI. ಕೋರಿದಂತೆ ರೈಲ್ವೆ ಕಂಪೆನಿಯವರು ಯಾತ್ರಿಕರು ಇಳಿಯುವ ಸ್ಥಳಗಳಿಗೆ ಸೈಡಿಂಗ್ಸ್‌ಯಾನೆ ಕಟ್ಟಪಡಗಳನ್ನ ಕಟ್ಟುವ ಪಕ್ಷಕ್ಕೆ ಮೇಲಾಕ್ಕೆ ಬರುವ ಜನಗಳು ಉಜ್ಜನಿ ರೈಲ್ವೆ ಸ್ಟೇಷನಿನಲ್ಲಿ ಇಳಿಯುವದಕ್ಕೆ ಅವಕಾಶ ಕೊಡಲ್ಪಡಲಾರದು.

ಲಷ್ಕರ್ ತಾರೀಖು 3—7—96.

ಎಂ. ಜೆ. ರೋಸ್,
ಗ್ವಾಲಿಯರ್ ಹುಜೂರ್ ದರ್ಬಾರ್,
ಚೀಫ್ ಸೆಕ್ರಿಟರಿ.

ತಾರೀಖು 29ನೇ ಜುಲೈ 1896.

ನಂ. 1144.—ರೆ. 427, ಸ್ ಸ್ 1888ನೇ ಇಸವಿಯ IVನೇ ರೆಗ್ಯುಲೇಷನಿನಿಂದ ಮೈಸೂರ್ ಲ್ಯಾಂಡ್ ರೆವಿನ್ಯೂ ಕೋಡಿನ 236ನೇ ಸೆಕ್ಷನಿನ 2ನೇ ಪ್ಯಾರಾ ಅನುಸರಿಸಿ ಮೈಸೂರ್ ಗವರ್ನ್‌ಮೆಂಟಿನವರು, ಸದರೀ ಕೋಡಿನ VIII ವ IXನೇ ಅಧ್ಯಾಯಗಳ ನಿಯಮಗಳನ್ನ ನೆಲಸಂಗಲ ತಾಲ್ಲೂಕಿನಲ್ಲಿರುವ ಕಾಯಂಗುಂತ್ತಾ ಕುಲಿಪುರ ಗ್ರಾಮಕ್ಕೆ ಲಾಗಾವ್ ಮಾಡುವ ಬಗ್ಗೆ, ಅಧಿಕಾರ ಕೊಟ್ಟಿರುತ್ತಾರೆ.

ತಾರೀಖು 30ನೇ ಜುಲೈ 1896.

ನಂ. 1173.—ರೆ. ಫೈ. 161—92, ಮೈಸೂರ್ ಸ್ಟೇಟ್ ರೈಳ್ವೆ. ಇಷ್ಟೂರ್ಟಿಸಿಗೆ ಸಂಬಂಧಪಟ್ಟ ರೂಲ್ಸಿನ 5 ವ 6ನೇ ರೂಲುಗಳಿಗೆ ಈ ಕೆಳಗೆ ಕಂಡದ್ದನ್ನ ಬದಲಾಗಿ ಶೇರಿಸುವದಕ್ಕೆ ಮೈಸೂರ್ ಗವರ್ನ್‌ಮೆಂಟಿನವರು ಮಂಜೂರ್ಮಾಡಿರುತ್ತಾರೆ:—

5. "ಇಷ್ಟೂರ್ಟಿಸಿನ ಕೆಲಸಗಳಿಗೋಸ್ಕರ ಗಣಿಸಲ್ಪಡಬೇಕಾಗಿ ಬರುವ ದಿನಕ್ಕೆ ಹಿಂದಿನ ಜನನದಿನವಾಗಲಿ ಯಾ ಮುಂದಿನ "ಜನನ ದಿನವಾಗಲಿ ಯಾವದು ಸಮೀಪವಾಗಿರುತ್ತದೆಯೋ ಅದು ಭೀಮಾದಾತನ ವಯಸ್ಸಾಗಿ ತೆಗದುಕೊಳ್ಳಲ್ಪಡುವದು. ಸದರೀ ದಿನ "ವು ಉಭಯ ಜನನ ಕಾಲಗಳಿಗೆ ಸಮಾಂತರಉಳ್ಳದ್ದಾಗಿರುವ ಪಕ್ಷದಲ್ಲಿ ಆತನ ವಯಸ್ಸು ಹಿಂದಿನ ಜನನ ದಿನದಲ್ಲಿ ಆಗಿರುವ ವಯಸ್ಸಾ "ಗಿ ಯೋಚಿಸಲ್ಪಡುವದು."

6. "ಈ ರೂಲುಗಳು ಜಾರೀಗೆ ಬಂದ ತರುವಾಯ ಮೈಸೂರ ಗವರ್ನ್‌ಮೆಂಟಿನ ನವುಕರಿಗೆ ದಾಖಲಾಗಬಹುದಾದ ವಿಷಯ "ಜನಗಳ ವಿಷಯದಲ್ಲಿ ಅವರು ಗವರ್ನ್‌ಮೆಂಟ್ ನವುಕರಿಗೆ ದಾಖಲಾದ ತಾರೀಖಿನಿಂದಲೂ, ಆಥವಾ 21 ವರುಷಗಳ ವಯಸ್ಸಿನ ಮುಂ "ಜೆಯೇ ಗವರ್ನ್‌ಮೆಂಟ್ ನವುಕರಿಯಲ್ಲಿ ಶೇರಿದಂಥಾವರ ವಿಷಯದಲ್ಲಿ 20 ವರುಷ 6 ತಿಂಗಳುಗಳ ವಯಸ್ಸು ಪೂರೈಸಿದ ತಾರೀಖಿನಿಂ "ದಲೂ ಇಷ್ಟೂರ್ಟಿಸು ಅವಶ್ಯಕವಾಗಿರತಕ್ಕದ್ದು. ಪರಂತು ವಿನಾಯಿಸಲ್ಪಟ್ಟ ಸಂದರ್ಭಗಳಲ್ಲಿ ನಿರ್ಣಯಿಸಲ್ಪಟ್ಟ ಕಾಲಕ್ಕೆ ಮಾತ್ರ "ಕೆಲಸಕ್ಕೆ ಇಡಲ್ಪಟ್ಟಿರುವ ಆಫಿಸರುಗಳು ಅವಶ್ಯಕವಾದ ಇಷ್ಟೂರ್ಟಿಸಿನಿಂದ ವಿನಾಯಿಸಲ್ಪಡಬಹುದು. 45 ವರುಷಗಳ ವಯಸ್ಸು "ಮೀರಿದ ಯಾ 10 ರೂಪಾಯಿಗಳ ತಲಬಿಗೆ ಕೀಳ್ಪಟ್ಟ ಯಾವ ಆಫಿಸರು ಮೊದಲಿನ ಯಾ ಆ ತರುವಾಯದ ಇಷ್ಟೂರ್ಟಿಸಿಗೆ ಅರ್ಹ "ನಾಗಿರುವದಿಲ್ಲ."

ತಾರೀಖು 11ನೇ ಆಗಸ್ಟ್ 1896.

ನಂ. 1502.—ರೆ. 579, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ಕಡೂರು ಡಿಸ್ಟ್ರಿಕ್ಟ್ ಜೆಪ್ಯೂಟಿ ಕಮ್ಮಿಷನರ್ ಮೆಸ್ಟರ್ ಎಚ್. ಎಚ್. ಸ್ಪಾರ್ಕ್ಸ್‌ಯವರಿಗೆ, 1896ನೇ ಆಗಸ್ಟ್ 12ನೇ ತಾರೀಖಿನಾರಭ್ಯ ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಸೀನಿಯರ್ ಅಸಿಸ್ಟೆಂಟ್ ಕಮ್ಮಿಷನರ್ ಯವರು, ಸದರೀ ಮೆಸ್ಟರ್ ಸ್ಪಾರ್ಕ್ಸ್ ಯವರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ಡಿಸ್ಟ್ರಿಕ್ಟಿನ ಚಾಲ್ತಿ ಕೆಲಸಗಳ ಚಾರ್ಜಿನಲ್ಲಿರತಕ್ಕದ್ದು.

ನಂ. 1548.—ಎಕ್ಸೈಸ್. 62, ಸ್ ಸ್ 1893ನೇ ಜನವರಿ 14ನೇ ಮಕ್ತುಂ 11813—ರೆ. ಫೈ. 233–92ನೇ ನಂಬರ್ ಗವರ್ನ್‌ಮೆಂಟ್ ಇಸ್ತಿಹಾರ್‌ನಾಮೆಯಲ್ಲಿರುವ Vನೇ ರೂಲಿನ 6ನೇ ಪ್ಯಾರಾ (13)ನೇ ಕ್ಲಾಜಿಗೂ ಮತ್ತು ಸದರೀ ಇಸ್ತಿಹಾರ್‌ನಾಮೆಗೆ ಶೇರಿಸಿರುವ "ಎ" ಶೆಡ್ಯೂಲಿನ 4 (4)ನೇ ಪರತ್ತಿಗೂ ಈ ಕೆಳಗೆ ಕಂಡದ್ದನ್ನ ಬದಲಾಗಿ ಶೇರಿಸುವ ಬಗ್ಗೆ ಮೈಸೂರ ಗವರ್ನ್‌ಮೆಂಟಿನವರು ಅಪ್ಪಣೆ ಕೊಡುತ್ತಾರೆ.

ರೆವಿನ್ಯೂ ಬೋರ್ಡಿನ ಸ್ಟ್ಯಾಂಡಿಂಗ್ ಆರ್ಡರುಗಳ XIನೇ ಅಧ್ಯಾಯದ 170ನೇ ರೂಲಿನ 4ನೇ ಪ್ಯಾರಾವಿಗೆ ಬಳಪಟ್ಟುವುದ

XIನೇ ಅಧ್ಯಾಯ, 170ನೇ ರೂಲ್, 4ನೇ ಪ್ಯಾರಾ "ಬಳ್ಳಾರಿ, ಅನಂತಪುರ, ಕಡಪ, ಉತ್ತರ ಆರ್ಕಾಟು, ಶಾಲ್ಯ ಮತ್ತು ಕೊಯಿಮುತ್ತೂರು ಡಿಸ್ಟ್ರಿಕ್ಟ್‌ಗಳ ಕಲೆಕ್ಟರುಗಳು ಮೈಸೂರಿಂದ ಮತ್ತು ಮೈಸೂರಿಗೆ ಶೇಂದಿಯನ್ನು ಆಮದರಫ್ತ್ ಮಾಡುವ ಬಗ್ಗೆ ಅಪ್ಪಣೆ ಕೊಡಬಹುದು. ಪರಂತು ಶೇಂದಿಯು ಶೇದಾರಫ್ತ್ ಮಾಡಲ್ಪಡುವ ಇಜಾರೆ ಸ್ಥಳಗಳ ಗುತ್ತಿಗೆದಾರ್ರಿಗೆ ಮಾತ್ರವೇ ರಹದಾರಿಗಳು ಕೊಡಲ್ಪಡತಕ್ಕದ್ದು."

ರಾಸ್ ಪ್ರೆಸಿಡೆನ್ಸಿಯಲ್ಲಿರುವ ಬಳ್ಳಾರಿ, ಅನಂತಪುರ, ಕಡಪ ಉತ್ತರ ಆರ್ಕಾಟು, ಶಾಲ್ಯ ಮತ್ತು ಕೊಯಿಮುತ್ತೂರು ಡಿಸ್ಟ್ರಿಕ್ಟ್‌ಗಳಿಂದ ಮತ್ತು ಸದರೀ ಡಿಸ್ಟ್ರಿಕ್ಟ್‌ಗಳಿಗೆ ಶೇಂದಿಯನ್ನ ಆಮದರಫ್ತ್ ಮಾಡುವ ಬಗ್ಗೆ ಬೆಂಗಳೂರು, ಕೋಲಾರ, ತುಮಕೂರು, ಮೈಸೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟ್‌ಗಳ ಡೆಪ್ಯೂಟಿ ಕಮ್ಮಿಷನರುಗಳು ಅವರುಗಳ ಯುಕ್ತಾನುಸಾರ ಅಪ್ಪಣೆ ಕೊಡಬಹುದು. ಸದರೀ ಆರ್ಡರಿನ ಯಕ್ಸ್‌ಟ್ರಾಕ್ಟ್ ಅಂದರೆ ಭಾಗವು ಇದರ ಬಾಜೂದಲ್ಲಿ ಕಾಣಿಸಿರುತ್ತೆ.

ತಾರೀಖು 17ನೇ ಆಗಸ್ಟ್ 1896.

ನಂ. 1874.—ರೆ. 705, ಮೈಸೂರ್ ಡಿಸ್ಟ್ರಿಕ್ಟ್ ಮಳವಳ್ಳಿ ತಾಲ್ಲೂಕಿಗೆ ಶೇರಿಸೋಣಾದ ಗ್ರಾಮಗಳನ್ನ ತೋರಿಸುವ ಇದಕ್ಕೆ ಜಂಟಿಸಲ್ಪಟ್ಟ ತಖ್ತೆಯ ಸರ್ವರ ತಿಳುವಳಿಕೆ ಬಗ್ಗೆ ಫಾಯಿಷ್ ಮಾಡಲ್ಪಟ್ಟಿರುತ್ತೆ.

ಮಾಗಣಿ.	ನಂಬರ್.	ಇಟ್ಟುಕೊಳ್ಳುವ ಬಗ್ಗೆ ಉದ್ದೇಸಿಸದ ಗ್ರಾಮಗಳ ಹೆಸರುಗಳು.	ನಂಬರ್.	3ನೇ ಕಾಲಮಿನಲ್ಲಿ ನಮೂದ್ಮಾಡಲ್ಪಟ್ಟಿರುವ ಗ್ರಾಮಗಳಿಗೆ ಶೇರಿಸಲ್ಪಡಬೇಕಾದ ಗ್ರಾಮಗಳ ಹೆಸರುಗಳು.	ಪರಾ.
1	2	3	4	5	6
ಮಳವಳ್ಳಿ ..	1	ನೆಟ್ಟಕಲ್ಲು	1	ಕಾಡೆಂಕವಜಳ್ಳಿ	
ಗೌಡಗೆರೆ ..	2	ಅಂತರವಳ್ಳಿ	2	ಹೊಸಹಳ್ಳಿ	

ತಾರೀಖು 21ನೇ ಆಗಸ್ಟ್ 1896.

ನಂ. 2070.—ರೆ. ಫೈ. 24—96, ಮೈಸೂರ ಸರ್ವಿಸ್ ರೆಗ್ಯುಲೇಷ್ಗಳ 188ನೇ ಆರ್ಟಿಕಲ್ ಅನುಸರಿಸಿ, ಷಿಕಾರಿಪುರ ತಾಲ್ಲೂಕು ಅಮಲ್ದಾರ್ ಕುಂದಾಪುರ ಸುಬ್ಬರಾಯರಿಗೆ, 1896ನೇ ಆಗಸ್ಟ್ 18ನೇ ಮೆರ್ಕ್ಕಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ವೊಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಶಿವಮೊಗ್ಗ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಆಫಿಸ್ ರೆವಿನ್ಯೂ ಹೆಡ್ ಮುನಷಿ ಬಾಲಕೃಷ್ಣರಾಯರು ಸದರೀ ಕುಂದಾಪುರ ಸುಬ್ಬರಾಯರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಷಿಕಾರಿಪುರದ ತಾಲ್ಲೂಕಿನ ಅಮಲ್ದಾರ್ ವ 3ನೇ ಕ್ಲಾಸ್ ಮೂಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಮೊಕರರ್ರಾಡಲ್ಪಟ್ಟಿರುತ್ತಾರೆ.

ತಾರೀಖು 24ನೇ ಆಗಸ್ಟ್ 1896.

ನಂ. 2075.—ರೆ. 760, ಮೈಸೂರ ಸರ್ವಿಸ ರೆಗ್ಯುಲೇಷ್ಗಳ 172ನೇ ಆರ್ಟಿಕಲ್ ಅನುಸರಿಸಿ, ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಮೆಸ್ಟರ್ ಏ. ಕೃಷ್ಣ ಸ್ವಾಮಯ್ಯಂಗಾರ್ರಿಗೆ ಮಾಹೆಮಜಕೂರು 21ನೇ ತಾರೀಖಿನ ಲಾಗಾಯತು ಹತ್ತು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

2. ಸೀನಿಯರ್ ಅಸಿಸ್ಟೆಂಟ್ ಕಮ್ಮಿಷನರವರು ಸದರೀ ಮೆಸ್ಟರ್ ಏ. ಕೃಷ್ಣ ಸ್ವಾಮಯ್ಯಂಗಾರ್ರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ಡಿಸ್ಟ್ರಿಕ್ಟಿನ ಚಾರ್ಜಿನಲ್ಲಿರತಕ್ಕದ್ದು.

ನಂ. 2079.—ರೆ. 764, ಹಾಲಿ ಬೆಂಗಳೂರು ಡಿಸ್ಟ್ರಿಕ್ಟಿಗೆ ಕೇರಿದ ಪ್ರೊಬೇಷನೆರಿ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಎಂ. ಶಾಮರಾವ್, ಎಂ. ಏ., ಯವರು ಮೈಸೂರು ಡಿಸ್ಟ್ರಿಕ್ಟಿಗೆ ಹಂಗಾಮಿಯಾಗಿ ವರ್ಗ ಮಾಡಲ್ಪಟ್ಟಿರುತ್ತಾರೆ.

ನಂ. 2126.—ರೆ. ಫೈ. 29—26, ಮೈಸೂರ ಸರ್ವಿಸ ರೆಗ್ಯುಲೇಷ್ಗಳ 171ನೇ ಆರ್ಟಿಕಲ್ ಅನುಸರಿಸಿ, ಕಂಟ್ರೋಲರಿಗೆ ಚೀಫ್ ಅಸಿಸ್ಟೆಂಟರಾದ ಮೆಸ್ಟರ್ ಜೆ. ಆರ್. ಬ್ಯಾರೋಯವರಿಗೆ, 1896ನೇ ಆಗಸ್ಟ್ 14ನೇ ತಾರೀಖು ಲಾಗಾಯತು ಎರಡು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ನಂ. 2128.—ರೆ. ಫೈ. 125—95, ಮೈಸೂರ ಸರ್ವಿಸ ರೆಗ್ಯುಲೇಷ್ಗಳ 171ನೇ ಆರ್ಟಿಕಲ್ ಅನುಸರಿಸಿ, ತರೀಕೆರೆ ತಾಲ್ಲೂಕಿನ ಅಮಲ್ದಾರ್ ಎ: ಸುಬ್ಬರಾಯರಿಗೆ, 1896ನೇ ಆಗಸ್ಟ್ 13ನೇ ತಾರೀಖಿನಾರಭ್ಯ ಯಾ ಅವರುಪಯೋಗಿಸಿಕೊಳ್ಳುವ ಇತರ ತಾರೀಖಿನ ಲಾಗಾಯತು ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

2. ತಾಲ್ಲೂಕು ಶಿರಸ್ತೇದಾರ್ರು, ಸದರೀ ತಾಲ್ಲೂಕಿನ ಅಮಲ್ದಾರ್ರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ತಾಲ್ಲೂಕಿನ ಚಾಲ್ತಿ ಕೆಲಸಗಳ ಚಾರ್ಜಿನಲ್ಲಿ ಇದ್ದರು.

ತಾರೀಖು 26ನೇ ಆಗಸ್ಟ್ 1896.

ನಂ. 2236.—ರೆ. ಫೈ. 141—95, ಅರಸೀಕೆರೆ ತಾಲ್ಲೂಕಿನ ಅಮಲ್ದಾರ್ ಎ. ವೀರರಾಘವಲು ನಾಯಿಡು ಯವರು, ಅವರಿಗೆ 1896ನೇ ಜೂ 9ನೇ ಮರ್ಕ್ಕಂ 10674.—ರೆ. 4216ನೇ ನಂ. 26ನೇ ಮರ್ಕ್ಕಂ 11207.—ರೆ. ಫೈ. 141—95ನೇ ನಂ. ಮತ್ತು ಜುಲೈ 24ನೇ ಮರ್ಕ್ಕಂ 957.—ರೆ. ಫೈ. 141—95ನೇ ನಂ. ಗವರ್ಮೆಂಟ್ ಇಸ್ತಿಹಾರ್ನಾಮೆಗಳಲ್ಲಿ ಕೊಡಲ್ಪಟ್ಟಿದ್ದ ಮೂರು ತಿಂಗಳ ಪ್ರಿವಿಲೀಜ್ ರಜಾ 1896ನೇ ಜೂ 2ನೇ ತಾರೀಖು ಲಾಗಾಯತು ಉಪಯೋಗಿಸಿಕೊಂಡು, 1896ನೇ ಆಗಸ್ಟ್ 13ನೇ ಮರ್ತ್ತು ಮಿನ ಮಧ್ಯಾನ್ಹಾತ್ಪರ ಕೆಲಸಕ್ಕೆ ಹಾಪಸ್ ಬಂದಿರುತ್ತಾರಾಗಿ, ಉಪಯೋಗಿಸಿಕೊಳ್ಳದ ರಜಾ ಭಾಗವು ಇದರಿಂದ ರದ್ದುಮಾಡಲ್ಪಟ್ಟಿರುತ್ತೆ.

ಹುಕುಂ ಬವೋಜೀಬ್,
ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ಮೆಂಟ್ ಸೆಕ್ರೆಟರಿ.

ಮಿ ಲಿ ಟ ರಿ.

ಇಸ್ತಿಹಾರ್.

ತಾರೀಖು 25ನೇ ಆಗಸ್ಟ್ 1896.

ಮೈಸೂರ ಪೈದಲ್ ಫೂಜಿನ 3ನೇ ಪಟೂಲಮಿನಲ್ಲಿ ಈ ಕೆಳಗೆ ಕಂಡ ಬಡ್ತಿಯು, 1896ನೇ ಆಗಸ್ಟ್ ಗುರ್ರೇ ಲಾಗಾಯತು ಮಾಡಲ್ಪಟ್ಟಿರುತ್ತೆ:—

ಹುಚ್ಚಾ, 1ನೇ ಗ್ರೇಡ್ ಜವಾನ್ದಾರಿಯಿಂದ 2ನೇ ಗ್ರೇಡ್ ಸುಬೇದಾರಿಗೆ.

ಹುಕುಂ ಬವೊ ಜೀಬ್,
ಏ. ಎಚ್. ಮೆಕ್ಕ್ಲಿಟ್ಟೈರ್, ಲೆಫ್ಟಿನೆಂಟ್ ಕರ್ನಲ್,
ಮಿಲಿಟರಿ ಸೆಕ್ರೆಟರಿ.